**ಸಾಕ್ಷಿಯನ್ನು ದಿಃ 21.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಎರಡು ಐಎಂವಿ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ಒಟ್ಟಾಗಿ ನಿಪಿ. 12 ಎಂದು, ಅಂತಿಮ ದೋಷಾರೋಪಣಾ ಪಟ್ಟಿ ಹಾಗೂ ಅದರ ತರ್ಜುಮೆ ಪ್ರತಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 13 ಎಂದು,

ಮೂರು ಕೇಸ್ ಡೈರಿ ಹಾಗೂ ಅವುಗಳ ತರ್ಜುಮೆ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 14 ಎಂದು,

ಡಿ.ಎಲ್ ನ ನೋಟರಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 15 ಎಂದು,

ಅರ್ಜಿದಾರರ ಎರಡು ಫೋಟೋಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 16 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಪಿ. 15 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಬಿ.ಸಿ.ಎ ಕಲಿತಿರುತ್ತೇನೆ. ಅಪಘಾತ ಆಗಿ ಕಾಲು ತುಂಡರಿಸಿರುವ ಕಾರಣ ಕಚೇರಿಗೆ ಖುದ್ದಾಗಿ ಕೆಲಸಕ್ಕೆ ಹಾಜರಾಗಬೇಕಾದ ಕಾರಣ ಪ್ರಸ್ತುತ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಕೆಲಸ ಕಂಪ್ಯೂಟರ್ ನಲ್ಲಿ ಕುಳಿತು ಮಾಡುವಂತದ್ದು ಎಂದರೆ ಸರಿ. ಅದನ್ನು ಕಚೇರಿಯಲ್ಲಿ ಹಾಗೂ ಮನೆಯಲ್ಲಿ ಕುಳಿತುಕೊಂಡು ಮಾಡಬಹುದು ಎಂದರೆ ಸರಿ. ಅಪಘಾತದ ದಿನ ನಾನು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದೆ. ಅದು ನನ್ನ ತಮ್ಮ ಸುಮಂತ್ ನಿಗೆ ಸೇರಿದ್ದು. ಅದನ್ನು ನಾನು ಇಲ್ಲಿಂದ ಕೇರಳಕ್ಕೆ ತೆಗೆದುಕೂಂಡು ಹೋಗಿದ್ದೆ. ನನಗೆ ವಾಹನ ಚಾಲನ ಪರವಾನಗಿ ಇದೆ. ಅಪಘಾತ ಸಮಯದಲ್ಲಿ ನಾನು ಮೈಸೂರಿಗೆ ವಾಪಸ್ ಬರುತ್ತಿದ್ದೆ. ನನ್ನ ಹಿಂಬದಿಯಲ್ಲಿ ನಾನು ವಿವಾಹವಾಗಬೇಕಿದ್ದ ಹುಡುಗಿ ಇದ್ದಳು. ಕೇರಳದಿಂದ ಮೈಸೂರಿಗೆ 200 ಕಿ.ಮೀ ಆಗುತ್ತದೆ. ಅಪಘಾತ ಸ್ಥಳ ಮುಖ್ಯ ರಸ್ತೆ ಹಾಗೂ ವಾಹನ ದಟ್ಟಣೆ ಇರುವ ರಸ್ತೆ ಎಂದರೆ ಸರಿ. ನಾನು ಹಾಗೂ

ನನ್ನ ಹಿಂಬದಿ ಸವಾರಳು ಮಾತನಾಡಿಕೊಂಡು ರಸ್ತೆಯ ಮೇಲೆ ನಿಗಾ ಇಡದೇ ಬರುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ಮುಂದಿನ ಕಾರನ್ನು ಓವರ್ ಟೇಕ್ ಮಾಡಲು ಹೋಗಿ ಎದುರುದಾರರ ಕಾರಿಗೆ ನಾವೇ ಡಿಕ್ಕಿ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ಕಾರನ್ನು 30-40 ಮೀಟರ್ ದೂರದಲ್ಲಿ ನೋಡಿದ್ದೇನೆ. ಆಗ ನನ್ನ ವಾಹನವನ್ನು ನಿದಾನ ಮಾಡಿ ಎಡಕ್ಕೆ ಚಲಾಯಿಸಬಹುದಿತ್ತು ಎಂದರೆ ಸರಿ. ಆಗ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ವೇಗವಾಗಿ ಬಂದು ಡಿಕ್ಕಿ ಪಡಿಸಿರುತ್ತಾರೆ ಎನ್ನುತ್ತಾರೆ. ಅಪಘಾತದಿಂದ ನನ್ನ ಬಲಗಾಲು ತುಂಡಾಗಿತ್ತು. ನನಗೆ ಪ್ರಜ್ಞೆ ಇತ್ತು. ಸ್ಥಳೀಯರು ನನ್ನನ್ನು ಅಸಂಮ್ಯನ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಆಂಬೂಲೆನ್ಸ್ ನಲ್ಲಿ ಮೈಸೂರಿನ ಅಪೋಲೋ ಆಸ್ಪತ್ರೆಗೆ ಸೇರಿಸಿದ್ದಾರೆ. 10 ದಿನ ಒಳರೋಗಿಯಾಗಿದ್ದು ಡಾ. ಶ್ರೇಯಸ್ ಚಿಕಿತ್ಸೆ ನೀಡಿದ್ದಾರೆ. ಗುಣಮುಖನಾದ ನಂತರ ಬಿಡುಗಡೆಗೊಳಿಸಿದ್ದಾರೆ ಎಂದರೆ ಸರಿ. ಆನಂತರ 15 ದಿನದಲ್ಲಿ ಹೊಲಿಗೆ ಬಿಚ್ಚಿಸಲು ಹೋಗಿದ್ದೆ. ನಾನು ಕರಾರು ಆಧಾರದ ಮೇಲೆ ಕೆಲಸದಲ್ಲಿದ್ದೆ. ನಾನು 2020-2021 ರಲ್ಲೇ ಕೆಲಸಕ್ಕೆ ಸೇರಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಔಷಧಿಯ ಖರ್ಚು ವೆಚ್ಚಗಳನ್ನು ವಿಪ್ರೋ ಕಂಪನಿಯವರು ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ವಿಮಾ ಕಂಪನಿಯಿಂದ ಹಣ ಪಡೆದಿಲ್ಲ. ಅಪಘಾತ ಆದ ನಂತರ ನಾನು ಕೆಲಸಕ್ಕೆ ಹೋಗಿಲ್ಲ. ಕಂಪನಿಯವರು ಆಫೀಸಿಗೆ ಬಂದರೆ ಮಾತ್ರ ಕೆಲಸ ಮುಂದುವರಿಸುವಂತೆ ಹೇಳಿದ್ದರು. ಆ ದಿನ ನಾನು ಜಾಗರೂಕನಾಗಿ ವಾಹನ ಚಲಾಯಿಸಿದರೆ ಅಪಘಾತ ತಪ್ಪಿಸಬಹುದಾಗಿತ್ತು ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಕಾರಿನವರ ತಪ್ಪಿಲ್ಲ ಎಂದರೆ ಸರಿಯಲ್ಲ. ಆದ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

3. ಜೆಟ್ ಕಿಂಗ್ ಕಂಪನಿಯವರ ಆಫರ್ ಅನ್ನು ಒಪ್ಪಿಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಾಖಲೆಗಳನ್ನು ಸೃಷ್ಠಿ ಮಾಡಿಕೂಂಡು ಈ ಪ್ರಕರಣಕೊಸ್ಕರ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2-3 ತಿಂಗಳ ಹಿಂದೆ ವೈಧ್ಯರಲ್ಲಿಗೆ ಹೋಗಿದ್ದೆ.

(1 ನೇ ಎದುರುದಾರರು ಕಲಾವಕಾಶ ಕೋರಿದ್ದು ಸಕರಣ ಇಲ್ಲ ಎಂದು ಪರಿಗಣಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.